# ಹೀಗೊಂದು ಗಾರ್ಡನ್ ಮನೆ



**ಮನೆಯ ಸುತ್ತ ಬೆಳೆಸಿರುವ ಸುಂದರ ಉದ್ಯಾನಕ್ಕೆ ರಾಧಾ ರಂಗಸ್ವಾಮಿಯವರು ಪ್ರತಿ ವರ್ಷವೂ ಪ್ರಶಸ್ತಿಗಳನ್ನು ಪಡೆಯುತ್ತಿದ್ದಾರೆ. ಇವರ ಪುಷ್ಪಪ್ರೀತಿ ಇತರರಿಗೂ ಮಾದರಿ ಆಗುವಂತಿದೆ.**

**ಅಲೇಖ**
ಚಿತ್ರಗಳು: ಆನಂದ ಬಕ್ಷಿ



ಬೆಂಗಳೂರಿಗೆ 'ಗಾರ್ಡನ್ ಸಿಟಿ' ಎನ್ನುವ ಹೆಸರು ಸುಮ್ಮನೆ ಬಂದದ್ದಲ್ಲ. ಅದರ ಹಿಂದೆ ಸರ್ಕಾರದ್ದೋ, ಸ್ಥಳೀಯ ಸಂಸ್ಥೆಗಳದ್ದೋ ಶ್ರಮಕ್ಕಿಂತ ಹೆಚ್ಚಾಗಿ ಇಲ್ಲಿನ ಉದ್ಯಾನಪ್ರಿಯ ನಾಗರಿಕರ ಪಾತ್ರ ಬಹಳ ದೊಡ್ಡದಿದೆ. ಬೆಂಗಳೂರಿನಲ್ಲಿ ಮಹಾನಗರಪಾಲಿಕೆಯವರು ಒಂದು ಮರಕ್ಕೆ ಕೊಡಲಿ ಹಾಕುವುದಿದ್ದರೂ ನಾಗರಿಕರು ಸುಮ್ಮನೆ ಕೂರುವುದಿಲ್ಲ. ಮನವಿ, ಒತ್ತಡ, ಪ್ರತಿಭಟನೆ, ವಿಚಾರ ಸಂಕಿರಣ, ಕೋರ್ಟಿಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ– ಹೀಗೆ ನೂರೆಂಟು ರೀತಿಯ ಪ್ರತಿರೋಧಗಳನ್ನು ಒಡ್ಡುತ್ತಾರೆ. ಈ ಪ್ರತಿರೋಧ ಸುಮ್ಮನೆ ವಿಘ್ನಸಂತೋಷಕ್ಕಲ್ಲ; ಅದು ಮರಗಿಡಗಳ ಬಗ್ಗೆ ಇಲ್ಲಿನ ನಾಗರಿಕರಿಗೆ ಇರುವ ಅದಮ್ಯ ಪ್ರೀತಿಯ ಸಂಕೇತ. ನಾಗರಿಕರು ವೈಯಕ್ತಿಕವಾಗಿ ಮಾತ್ರವಲ್ಲ, ಹತ್ತಾರು ಸಂಘ ಸಂಸ್ಥೆಗಳ ಮೂಲಕವೂ ಇಂತಹ ವೃಕ್ಷಪ್ರೀತಿಯನ್ನು ಸದಾ ಕಾಲ ವ್ಯಕ್ತಪಡಿಸುತ್ತಾರೆ. ಕರ್ನಾಟಕದ ಬೇರೆ ಮಹಾನಗರಗಳಲ್ಲಿ ಇಂತಹ ಹಸಿರು–ಪ್ರೀತಿ ಇದ್ದರೂ, ಬೆಂಗಳೂರಿನದ್ದು ಸಂಘಟಿತ ಮತ್ತು ತೀವ್ರವಾದ ಪ್ರೀತಿ. ಇಲ್ಲಿನ ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್ ಉದ್ಯಾನ ಪ್ರೀತಿಯ ಮೇರು ಸಂಕೇತ–ದಂತೆ ಇವತ್ತಿಗೂ ಉಳಿದುಕೊಂಡಿವೆ. ಸಂಚಾರ ದಟ್ಟಣೆಯಿಂದ

(8ನೇ ಪುಟ ನೋಡಿ)